ಭಯೋತ್ಪಾದಕ ಪ್ರಕರಣಗಳು

22 (152); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ)

ಅ) ರಾಜ್ಯ ಸರ್ಕಾರವು ಕಳೆದ 2 ವರ್ಷಗಳಲ್ಲಿ ಎಷ್ಟು ಜನ ಭಯೋತ್ಪಾದಕರೆಂದು ಸಂಶಯದಿಂದ ಬಂಧಿಸಲಾಗಿರುತ್ತದೆ;

ಆ) ಈ ಪ್ರಕರಣಗಳಲ್ಲಿ ಎಷ್ಟು ಜನರಿಗೆ ಚಾರ್ಜ್ ಶೀಟ್ ಹಾಕಲಾಗಿರುತ್ತದೆ;

ಇ) ನ್ಯಾಯಾಲಯದಲ್ಲಿ ಬಾಕಿಯಿರುವ ಭಯೋತ್ಪಾದಕರ ಪ್ರಕರಣಗಳೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಕರ್ನಾಟಕ ರಾಜ್ಯದಲ್ಲಿ ಭಯೋತ್ಪಾದಕ ಪ್ರಕರಣಗಳಲ್ಲಿನ ಆರೋಪಿಗಳನ್ನು ಕೆಳಕಂಡಂತೆ ಬಂಧಿಸಲಾಗಿದೆ.

ವರ್ಷ	ದಸ್ತಗಿರಿಯಾದ ಆರೋಪಿಗಳ ಸಂಖ್ಯೆ	ಪೋಲಿಸ್ ಠಾಣೆ & ಮೊಕದ್ದಮೆ ಸಂಖ್ಯೆ	ಸಂಘಟನೆಯ ಹೆಸರು
2013	02	ಬಸವೇಶ್ವರ ನಗರ ಪಿ.ಎಸ್ 384/12	ಹೂ ಜಿ & ಎಲ್–ಇ–ಟಿ
	12	ವಯ್ಯಾಲಿಕಾವಲ್ ಎಸ್ 118/2013	ಅಲ್ ಉಮಾ
2014	03	ವಯ್ಯಾಲಿಕಾವಲ್ ಪಿ.ಎಸ್ 118/2013	ಅಲ್ ಉಮಾ
	01	ಕಬ್ಬನ್ ಪಾರ್ಕ ಪೋಲಿಸ್ ಠಾಣೆ 2/10, 93/10, 94/10, 95/10 & 96/10	ಇಂಡಿಯನ್ ಮುಜಾಹಿದ್ದಿನ್
	01	ಗಂಗಮ್ಮನ ಗುಡಿ ಪೋಲಿಸ್ ಠಾಣೆ:218/14	ಐ.ಎಸ್.ಐ.ಎಸ್.
2015	04	ಪುಲಕೇಶಿ ನಗರ ಪೋಲಿಸ್ ಠಾಣೆ 11/2015	ಇಂಡಿಯನ್ ಮುಜಾಹಿದ್ದಿನ್

ಆ) 18 ಜನ ಭಯೋತ್ಪಾದಕರುಗಳ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ ಮತ್ತು ಉಳಿದ 05 ಜನ ಆರೋಪಿಗಳ ವಿರುದ್ಧ ತನಿಖೆ ಪ್ರಗತಿಯಲ್ಲಿದೆ.

ಇ) ನ್ಯಾಯಾಲಯದಲ್ಲಿ ಒಟ್ಟು 29 ಪ್ರಕರಣಗಳು ವಿಚಾರಣೆಯಲ್ಲಿರುತ್ತವೆ.

ಕೆಎಟಿ ವರ್ಗಾವಣೆಯಲ್ಲಿ ಬಾಕಿಯಿರುವ ಪ್ರಕರಣಗಳು

23 (153); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಅ) ರಾಜ್ಯದಲ್ಲಿ ಕೆಎಟಿ ವರ್ಗಾವಣೆ ವಿಷಯದಲ್ಲಿ ಎಷ್ಟು ಪ್ರಕರಣಗಳು ಹಾಗೂ ಬಾಕಿಯಿರುತ್ತದೆ; ಎಷ್ಟು ದಿನಗಳಿಂದ ಬಾಕಿ ಉಳಿದಿರುತ್ತದೆ;

ಆ) ಹಾಗಿದ್ದಲ್ಲಿ, ಈ ಪ್ರಕರಣಗಳನ್ನು ವಿಲೇವಾರಿ ಮಾಡಲು ಸರ್ಕಾರ ಇದುವರೆವಿಗೂ ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ)

ಅ) ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ವರ್ಗಾವಣೆ ವಿಷಯದಲ್ಲಿ ಬಾಕಿ ಇರುವ ಪ್ರಕರಣಗಳ ವರ್ಷವಾರು ಪಟ್ಟಿ :

ವರ್ಷ	ಬಾಕಿಯಿರುವ ಪ್ರಕರಣಗಳ ಸಂಖ್ಯೆ :
2006	21
2007	13
2008	28
2009	09
2010	12
2011	09
2012	38
2013	450
2014	749
ಒಟ್ಟು	**1329**